ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp. 45-50.**
**©*IIMRD*, Mysuru**

IIMRD JOURNALS

**www.iimrd.com**

# ಜನಪದ ಕಥೆಗಳಲ್ಲಿ ಮಹಿಳೆಯ ಚಿತ್ರಣ

**ರಾಮಾಂಜಿನಿ ಕೆ.**

*ಸಂಶೋಧನಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

***ಸಾರಾಂಶ:(Abstract)***

*ಜನಪದ ಸಾಹಿತ್ಯ ಜನಸಮೂಹದ ಸಮಷ್ಟಿ ಸೃಷ್ಟಿ. ಇದು ಸಾಮಾಜಿಕ ಜೀವನದ ಸಂಕೇತ ಜನಸಾಮಾನ್ಯರ ಶೃತಿಯೂ ಹೌದು, ಸ್ಮೃತಿಯು ಹೌದು ಜನಪದವು ಬಾಯಿಂದ ಬಾಯಿಗೆ, ಊರಿಂದ ಊರಿಗೆ ಯುಗದಿಂದ ಯುಗಕ್ಕೆ ಕೆಲವು ಬದಲಾವಣೆಯನ್ನು ಹೊಂದಿರುವುದನ್ನು ನಾವು ನೋಡಬಹುದಾಗಿದೆ. ಸಾಮಾನ್ಯವಾಗಿ ಜನಪದ ಕಲೆ, ಸಾಹಿತ್ಯ ಅನಕ್ಷರಸ್ಥರಿಂದ ಸೃಷ್ಟಿಯಾದದ್ದು. ಅದರಲ್ಲಿ ಜನರ ಜೀವನದ ಸಮಸ್ತ ಮುಖಗಳು ಕಂಡು ಬರುತ್ತವೆ. ಕೃಷಿ ಕ್ಷೇತ್ರಗಳಲ್ಲಿ ಮನೆ ಗುಡಿಸಲು ಕಟ್ಟಡಗಳಲ್ಲಿ, ದೇವಸ್ಥಾನದ ನಿರ್ಮಾಣದಲ್ಲಿ ಪಾಠ ಶಾಲೆಗಳಲ್ಲಿ, ವಿವಾಹಾದಿ ಸಮಯೋಚಿತ ವ್ಯವಹಾರಗಳಲ್ಲಿ ಉಡುಗೆ–ತೊಡುಗೆಗಳಲ್ಲಿ, ಆಯುರ್ವೇದಾದಿ ವೈಜ್ಞಾನಿಕ ಕ್ಷೇತ್ರಗಳಲ್ಲಿಯೂ ಅದರ ಮೂಲಭೂತಾಂಶಗಳನ್ನು ಕಾಣುತ್ತೆವೆ. ಜನಪದ ಸಾಹಿತ್ಯವು ಹೇಗೆಂದರೆ ಅದೊಂದು ಅಗಾಧ ಪ್ರತಿಭೆಯಿದ್ದಂತೆ ಏಕೆಂದರೆ ಹಲವಾರು ರೀತಿಯಲ್ಲಿ ನಾವು ನೋಡುವುದಾದರೆ ಓದು–ಬರಹ ಬಾರದ ಇವರು ಅದ್ಭುತವಾಗಿ ಕಥೆ–ಕಾವ್ಯಗಳನ್ನು ಕಟ್ಟುವ ಕಲೆಯನ್ನು ಗಮನಿಸಿದರೆ ಪ್ರಾಚೀನ ಕವಿಗಳು ಹೇಳಿದ ಮಾತು ಸರಿ ಎನಿಸುತ್ತದೆ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್'' ಎನ್ನುವ ಮಾತು ಸರಿ ಎನಿಸಲಾರದೆ ಇರದು.*

***ಮುಖ್ಯಪದಗಳು (Keywords)*** *ಸಾಹಿತ್ಯ, ಚರಿತ್ರೆಗಳು, ಸಂಸ್ಕೃತಿ, ಕಾದಂಬರಿ, ನಾಟಕಗಳು.*

**ಪೀಠಿಕೆ**

ಒಂದು ರೀತಿಯಲ್ಲಿ ಹೇಳಬೇಕೆಂದರೆ ಒಂದು ಕಾಲದಲ್ಲಿ ಇವರುಗಳಿಲ್ಲದೆ ಹಳ್ಳಿಯ ಮದುವೆ ಮನೆಗಳಿಗೆ ಸಂಭ್ರಮದ ಕಳೆ ಕಟ್ಟುತ್ತಿರಲಿಲ್ಲ. ಹೊಲ–ಗದ್ದೆಗಳಲ್ಲಿ ಅನಾಯಾಸವಾಗಿ ಕೆಲಸಗಳು ಮುಂದೆಕ್ಕೆ ಸಾಗುತ್ತಿರಲಿಲ್ಲ. ಬದುಕಿನ ಪ್ರತಿ ಹಂತದಲ್ಲೂ ಶ್ರೀಮಂತರಿಗೆ ಇವರ ಅವಶ್ಯಕತೆ ಬೇಕಿತ್ತು. ಹಿಂದಿನ ಸಮಾಜದಲ್ಲಿ ಇವರ ಇರುವಿಕೆ ರಾಜಾಶ್ರಯಗಳಲ್ಲಿ ಕವಿಗಳಿದ್ದಂತೆ ದೈಹಿಕ ಶ್ರಮವನ್ನು ಹಗುರಗೊಳಿಸಲಿಕ್ಕೆ ಮನಸ್ಸಿನ ಬೇಗುದಿಯ ಪರಿಹಾರಕ್ಕೆ ಜನಪದ ಸಾಹಿತ್ಯದ ಸೃಷ್ಟಿ ಅನಿವಾರ್ಯವಾಗಿತ್ತು. ಹೊಟ್ಟೆ ತುಂಬಿಸಿಕೊಳ್ಳಲು ಮಾಡುತ್ತಿದ್ದ ಹೋರಾಟದ ಪಾಡು ಈ ಶ್ರಮ ಜೀವಿಗಳಿಗೆ ಹಾಡು–ಕಥೆಯಾಗಿ ಹೊರಚಿಮ್ಮಿದೆ. ಜಗತ್ತಿನಾದ್ಯಂತ ಕಥೆಗಳನ್ನು ಹೇಳುವ ಪರಿಪಾಠವಿದೆ. ಇದೊಂದು ಪ್ರಜ್ಞಾಪೂರ್ವಕ ಮನರಂಜನಾ ಕಲೆ, ಸಾಮಾಜಿಕವಾಗಿ, ಧಾರ್ಮಿಕವಾಗಿ ಕಥೆ ಕೆಲವೊಮ್ಮೆ ಪಾತ್ರವಹಿಸಿದರೂ ಅಪ್ಪಟ ಮನರಂಜನೆಯೇ ಇದರ ಮುಖ್ಯ ಉದ್ದೇಶ ಯಾವುದೇ ವಯಸ್ಸಿನ ಮಿತಿಯಿಲ್ಲದೇ ಕಥೆಗಳು ಎಲ್ಲಾರಿಗೂ

*Please cite this article as: ರಾಮಾಂಜಿನಿ ಕೆ.* (2023). ಜನಪದ ಕಥೆಗಳಲ್ಲಿ ಮಹಿಳೆಯ ಚಿತ್ರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 45–50.*

ಬೇಕಾದ, ಕುತೂಹಲ ಕೆರಳಿಸುವ ಸಾಧನಗಳಾಗಿವೆ. ಕಥೆಗಳು ಮಕ್ಕಳಿಗೆ ಮಾತ್ರ ಎಂಬುದು ತಪ್ಪು ತಿಳುವಳಿಕೆ ಅಡಗಿಕೊಂಡು ಕಥೆ ಕೇಳುವ ಮಕ್ಕಳನ್ನು ಹಾಲೆಂಡ್ ದೇಶದ ಸಾರಾ ಎಂಬಲ್ಲಿ ಹಿರಿಯರು ಹೊರಗೆ ಓಡಿಸುತ್ತರಂತೆ. ಕೆಲವು ದೇಶಗಳಲ್ಲಿ ಒಂದು ಕರ್ತವ್ಯದಂತೆ ತಾಯಂದಿರು ಮಕ್ಕಳಿಗೆ ಕಥೆಗಳನ್ನು ಹೇಳುತ್ತಾರೆ. ಅಂತಹ ಕಡೆ ಕಥಾ ಪರಂಪರೆ ಉಳಿಯಲು ತಾಯಿ ಕಾರಣಳಗುತ್ತಾಳೆ. ನಮ್ಮಲ್ಲಿ ಹಾಗಾಗಿ ಜನಪದ ಕಥಗಳನ್ನು 'ಅಜ್ಜಿ ಕಥೆಗಳು', ಕಪ್ಪು ಕಥೆಗಳು' ಎಂಬ ಹೆಸರಿನಿಂದ ಕರೆಯುತ್ತಾರೆ. ಕಥೆ ಕೇಳುವಾಗ ಹೂಂ ಗುಟ್ಟುವುದು ಸಾಮಾನ್ಯ. ಆದ್ದರಿಂದ ನಮ್ಮ ಕರ್ನಾಟಕದಲ್ಲಿಯೇ ದಕ್ಷಿಣ ಕರ್ನಾಟಕದಲ್ಲಿ ಇವುಗಳಿಗೆ 'ಹೂಂ ಗುಟ್ಟುವ ಕಥೆ' ಎಂತಲೂ ಕರೆಯುತ್ತಾರೆ. ಹೀಗೆ ಒಂದೊಂದು ರೀತಿಯಲ್ಲಿ ಜನಪದ ಕಥೆಗಳ ರೂಪಗಳನ್ನು ನೋಡಬಹುದಾಗಿದೆ. ಕಥೆಗಳನ್ನು ಕೆಲವರು ಹೇಳಿದರೆ, ಮತ್ತೊಬ್ಬರು ಅದನ್ನು ತಿರಸ್ಕರಿಸುವ ರೀತಿಯನ್ನು ಸಹ ನಾವು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಜಾನಪದ ಸಂಪತ್ತು ವಿಫಲವಾಗಿದೆ ಅಷ್ಟೇ ವೈವಿಧ್ಯಮಯವಾಗಿದೆ. ಜನಪದ ಸಾಹಿತ್ಯ ಕಲೆ, ಗಾದೆ, ಒಗಟು, ಕಥೆ, ಐತಿಹ್ಯ, ಜನಪದ ಆಟಗಳು, ಆಹಾರ ಪದ್ಧತಿ, ನಂಬಿಕೆ, ಆಚರಣೆಗಳು ಜಾತ್ರೆ–ಉತ್ಸವಗಳು ಹೀಗೆ ಹತ್ತಾರು ಪ್ರಕಾರಗಳಿವೆ. ಜಾನಪದದ ಜಲ ಮೊಗದಷ್ಟು ಮತ್ತೆ ಮತ್ತೆ ತುಂಬಿಕೊಳ್ಳುತ್ತದೆ. ನಮ್ಮ ನಮ್ಮ ಶಕ್ತಿ ನೋಡುವ ದೃಷ್ಟಿ ಆಸಕ್ತಿಗನುಗುಣವಾಗಿ ತುಂಬಿಕೊಳ್ಳಬಹುದು.

ಜನಪದ ಕಥೆಗಳು ಪರಂಪರಾನುಗತವಾಗಿ ಬಾಯಿಂದ ಬಾಯಿಗೆ ಹರಿದು ಬಂದಂಥವುಗಳು ಬಾಯಿಂದ ಬಾಯಿಗೆ ಹರಿದು ಬಂದಂಥವುಗಳು. ಒಂದು ಕಾಲದಲ್ಲಿ ಮನರಂಜನೆಯ ಮಾಧ್ಯಮವಾಗಿದ್ದ ಜನಪದ ಕಥೆಗಳು ವ್ಯಕ್ತಿಯ ವೈಯಕ್ತಿಕ ಸಾಮಾಜಿಕ ಅವಶ್ಯಕತೆಯನ್ನು ಪೂರೈಸುವ ನಿಟ್ಟಿನಲ್ಲಿ ಸೃಷ್ಟಿಯಾದವುಗಳಾಗಿವೆ. ಇವು ಮಾನವನ ಪುರಾತನ ಸಂಸ್ಕೃತಿ ಹಾಗೂ ಸಂಪ್ರದಾಯಗಳ ಮೇಲೆ ತನ್ನದೇ ಆದ ರೀತಿಯಲ್ಲಿ ಚಾಪನ್ನು ಬೀರಿವೆ ಒಂದು ಮಾತಿದೆ ಸಮಾಜದಲ್ಲಿ ಹಾಡು ಬಾರದಿದ್ದವರು ಸಿಗಬಹುದು ಆದರೆ ಕಥೆ ಬಾರದೆ ಇರುವುವರು ಹುಡುಕಿದರೂ ಸಿಗುವುದಿಲ್ಲ ಎನ್ನುವ ಮಾತನ್ನು ಗಮನಿಸಬಹುದಾಗಿದೆ. ಅಂದರೆ ಜನಪದ ಕಥೆಗಳ ಪ್ರಭಾವ ಸಮಾಜದ ಮೇಲೆ ದಟ್ಟವಾಗಿ ಬೀರಿದೆ ಹೀಗೆ ಒಂದೊಂದು ಕಥೆಯನ್ನು ರಾತ್ರಿಯೆಲ್ಲಾ ಹೇಳುತ್ತಿದ್ದರು ಕಥೆಯಲ್ಲಿ ಸ್ವಾರಸ್ಯವಿದ್ದರೆ ಮಾತ್ರ ಎಚ್ಚರವಿದ್ದು ಕೇಳಲು ಸಾದ್ಯ ಕಥೆಗಾರರು ಕಥೆಯಲ್ಲಿ ಸ್ವಾರಸ್ಯವನ್ನು ತಂದು ಮನಸ್ಸಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತಿದ್ದರು. ಕಥೆಗಾರನೂ ತಾನು ಹೇಳುವ ಕಥೆಗೆ ಸಮಕಾಲಿನ ಸ್ಪರ್ಶವನ್ನು ನೀಡಿ ಕಥೆ ಹೇಳುತ್ತಿರುದನ್ನು ನೋಡಬಹುದಾಗಿದೆ ಕಥೆಗಾರನ ಪ್ರತಿಭಾ ಶ್ರೀಮಂತಿಕೆಯ ದ್ಯೋತಕವಾಗಿತ್ತು. ಜನರು ಹಾಡುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಕಷ್ಟವೆನಿಸಿದರೂ ಕಥೆಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಹಾಗಾಗಿ ಜನಪದ ಕಥೆಗಳು ಜಾನಪದದ ಇತರೆ ಪ್ರಕಾರಗಳಿಗಿಂತ ಹೆಚ್ಚು ಜನಪ್ರಿಯವಾಗಿ ಇರುವುದನ್ನು ಗಮನಿಸಬಹುದಾಗಿದೆ ಯಾವಾಗ ಮನುಷ್ಯನಿಗೆ ಮಾತಾಡೋ ಕಲೆ ಬಂದಿತ್ತು ಅಂದಿನಿಂದಲೆ ಜನಪದ ಕಥೆಗಳು ಪರಂಪರೆಯಿಂದ ಪರಂಪರೆಗೆ ಹರಿಯುತ್ತ ಕೆಲವು  ಮಾರ್ಪಾಡುಗಳನ್ನು ಹೊಂದುತ್ತ ಬಂದಿವೆ. ಇದರಿಂದ ಮಾನವನ ಸಾಂಸ್ಕೃತಿಕ ವಿಕಾಸದ ವಿವಿಧ ಮಾದರಿಗಳನ್ನು ಅಧ್ಯಯನ ಮಾಡುವುದಕ್ಕೆ ಜನಪದ ಕಥೆಗಳು ಸಹಕಾರಿಯಾಗಿವೆ ಎಂದರೆ ತಪ್ಪಾಗಲಾರದು ಇದರ ಜೊತೆಗೆ ಸಮಗ್ರ ಸಾಮಗ್ರಿಯನ್ನು ಒದಗಿಸುತ್ತವೆ. ಮಾನವನ ಬದುಕಿನಲ್ಲಿ ತಲೆತಲಾಂತರದಿಂದ ಬೆಳೆದು ಬಂದ ನಂಬಿಕೆಗಳು ಆಚಾರ ವಿಚಾರಗಳು ಸಂಪ್ರದಾಯಗಳು ಮೂಢನಂಬಿಕೆಗಳು ಮಾತಿನ

ವಿವಿಧ ಘಟ್ಟಗಳು ವೈವಿಧ್ಯಗಳು ಅಭಿವ್ಯಕ್ತಿಯ ಸ್ವರೂಪ ಮುಂತಾದವುಗಳನ್ನು ಒಳಗೊಂಡಿರುವ ಜನಪದ ಕಥೆಗಳು ಮಾನವನ ಪ್ರಾಚೀನ ಸಂಸ್ಕ್ರತಿಯ ಅಧ್ಯಯನಕ್ಕೆ ನೆರವಾಗುತ್ತದೆ.

ಜನಪದ ಕತೆ ಇದ್ದಕ್ಕಿದ್ದಂತೆ ಒಂದು ಕ್ರಿಯೆಯಿಂದ ಪ್ರಾರಂಭವಾಗುವುದಿಲ್ಲ ಅಲ್ಲದೆ ಮುಕ್ತಾಯವಾಗುವುದಿಲ್ಲ ಅಲ್ಲದೆ ದಿಢೀರನೆ ಏಕಾಏಕಿ ಮುಕ್ತಾಯವಾಗುವುದಿಲ್ಲ. ಉತ್ಸಾಹ ಕುತೂಹಲವನ್ನು ಕೆರಳಿಸಿಕೊಂಡು ಹೋಗಿ ಭಾವತೀವ್ರತೆಗೆ ಕೊಂಡೊಯ್ದು ನಿಧಾನವಾಗಿ ಅಂತ್ಯಗೊಳ್ಳುತ್ತದೆ ಅಲ್ಲಲ್ಲಿ ಪ್ರಜ್ಞಾಪೂರ್ವಕವಾಗಿಯೂ ಉತ್ಸಾಹ ಕುತೂಹಲವನ್ನು ಕೆರಳಿಸಿ ಕೊಂಡು ಹೋಗಿ ಭಾವತೀವ್ರತೆಗೆ ಕೊಂಡೊಯ್ದು ನಿಧಾನವಾಗಿ ಅಂತ್ಯಗೊಳ್ಳುತ್ತದೆ ಅಲ್ಲಲ್ಲಿ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾ ಪೂರ್ವಕವಾಗಿಯೋ ಬರುವ ವರ್ಣನೆಗಳು ಸಂಕ್ಷಿಪ್ತವಾಗಿರುತ್ತವೆ. ಕಥೆಯಲ್ಲಿ ಬರುವ ವ್ಯಕ್ತಿಗಳ ನಡವಳಿಕೆ ಸ್ವಭಾವ ಕೊನೆಯ ಸಂದರ್ಭದಲ್ಲಿ ಬದಲಾವಣೆಯಾಗಬಹುದು ಇಲ್ಲವೆ ಹಾಗೆ ಮುಂದುವರೆದು ಪಾತ್ರಗಳ ಬದುಕು ದುರಂತವಾಗಿ ಕೊನೆಗೊಳ್ಳಬಹುದು. ಅಣ್ಣ ತಮ್ಮಂದಿರು ಅತ್ತೆ–ಸೊಸೆ ವಾರಗಿತ್ತಿಯರು ಈ ಪಾತ್ರಗಳಲ್ಲಿ ಸಮಾಜದಲ್ಲಿ ನಾವು ದಿನನಿತ್ಯ ನೋಡುವ ಅಸೂಯೆ ದ್ವೇಷ ಮತ್ಸರ ವಿಜೃಂಭಿಸಿ ಕೊನೆಗೆ ಕಷ್ಟಪಟ್ಟ ವ್ಯಕ್ತಿಗಳು ಕತೆಯ ಮುಕ್ತಾಯದಲ್ಲಿ ಸುಖಮಯವಾಗಿ ಅಂತ್ಯವಾಗುವುದನ್ನು ಹಾಗೂ ಕೆಟ್ಟವರಿಗೆ ಶಿಕ್ಷೆಯಾಗಿ ಸಮಾಜಕ್ಕೆ ಸಂದೇಶವೂ ರವಾನೆಯಾಗುತ್ತದೆ. ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದ ಪಾತ್ರವನ್ನು ಕುರಿತು ವಿವರಿಸುವಾಗ ಸಂಸ್ಕ್ರತಿಯ ಕಲ್ಪನೆ ಮತ್ತು ಸಂಬಂಧಪಡುವ ಜ್ಞಾನ ವಿಷಯಗಳನ್ನು ಮೊದಲು ಗಮನಿಸಬೇಕಾಗುತ್ತದೆ. ಮಾನವನ ವರ್ತನೆಗಳ ಮೊತ್ತವನ್ನೇ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಸಾಂಸ್ಕ್ರತಿಕ ನಡವಳಿಕೆಗಳ ಅಭಿವ್ಯಕ್ತಿಯಾದ ಜಾನಪದವನ್ನು ಒಂದು **ಮಾನವಿಕಗಳ** ದೃಷ್ಟಿಯಿಂದ ಒಂದು ಕಡೆ **ಸಮಾಜ ವಿಜ್ಞಾನಗಳ** ದೃಷ್ಟಿಯಿಂದ ನೋಡುವುದು ಸಮಂಜಸವಾಗುತ್ತದೆ. ಜಾನಪದ ವಿಷಯವನ್ನು ಒಂದು ಪರಂಪರೆಯ ವಸ್ತುವಾಗಿ ತೆಗೆದುಕೊಂಡರೆ, ಆಗ ಅದು ಅದರ ಸಾಹಿತ್ಯಯದ ಅಧ್ಯಯನಕ್ಕೆ ಅಧೀನವಾಗಿ ಪರಿಣಮಿಸುತ್ತದೆ. ಸಮಾಜ ಶಾಸ್ತ್ರಜ್ಞರು ಜಾನಪದದಲ್ಲಿನ ಸಾಮಾಜಿಕ ಆಶಯಗಳನ್ನು ವಿವರಿಸಲು ಉಪಯೋಗಿಸಿಕೊಳ್ಳಬಹುದು.

ಜನಪದ ಕಥೆಗಳಲ್ಲಿನ ಸ್ತ್ರೀ ಪಾತ್ರಗಳನ್ನು ಗಮನಿಸುವಾಗ ಬಹು ಮುಖ್ಯವಾಗಿ ಮೂರು ರೀತಿಯ ಕಥೆಗಳನ್ನು ನೋಡಬೇಕಾಗುತ್ತದೆ. ಮೊದಲನೆಯ ಹಾಗೂ ಹೆಣ್ಣುಮಕ್ಕಳಿಗೆ ಅತಿ ಪ್ರಿಯವಾದಂತಹ ಕಥೆಗಳನ್ನು ಹೊಂದಿರುವ ಕಥೆಗಳಲ್ಲಿನ ನಾಯಕಿಯರೆಲ್ಲರು ಭಾರತೀಯ ಪುರಾಣ ಮಹಾಕಾವ್ಯಗಳಲ್ಲಿ ಚಿತ್ರಿತವಾಗಿರುವ ಆದರ್ಶ ನಾರಿಯರ ಪ್ರತಿರೂಪವಾಗಿರುವುದನ್ನು ನೋಡಬಹುದಾಗಿದೆ. ಅ ಕಥೆಗಳಲ್ಲಿ ಬರುವಂತೆ ಇವರೂಗಳು ಸಹ ಪಾತಿವ್ರತ್ಯ, ಚಾರಿತ್ರ್ಯ, ಶೀಲ, ಗುರುಹಿರಿಯರಿಗೆ ಭಕ್ತಿ, ವಿಧೇಯತೆ, ವಿನಯ ಮೊದಲಾದ ಸದ್ಗುಣಗಳ ಪ್ರತೀಕವಾಗಿರುವುದನ್ನು ಗಮನಿಸಬಹುದಾಗಿದೆ ಜೊತೆಗೆ ಯಾವುದಕ್ಕೂ ಎದುರಾಡದೆ ಮೌನವಾಗಿ ಸಹಿಸಿಕೊಂಡು ಪರರ ಸಂತೋಷ ಸಂತೋಷಕ್ಕಾಗಿ ಬದುಕುವ ಕಥೆಗಳನ್ನು ನೋಡಬಹುದಾಗಿದೆ.

ನಮ್ಮ ಜನಪದ ಕಥೆಗಳಲ್ಲಿ ಸ್ತ್ರೀಯರು ತಮ್ಮ ಪಾತಿವ್ರತ್ಯೆಯನ್ನು ಕಾಪಾಡಿಕೊಳ್ಳುವುದಕ್ಕೆ ಅವರು ಹಲವಾರು ರೀತಿಯ ತೊಂದರೆ, ನೋವನ್ನು ಅನುಭವಿಸುತ್ತಾರೆ ಪಾತಿವ್ರತ್ಯ ಬಲದಿಂದಲೆ ಆನೇಕ ಪವಾಡಗಳನ್ನು ಮಾಡಿರುವುದನ್ನು ಜನಪದರು ಕಥೆಗಳಲ್ಲಿ ನಾಯಕರು ತಮ್ಮ ದೈಹಿಕ ಬಲ

ಪರಾಕ್ರಮಗಳಿಂದ ಬುದ್ದಿವಂತಿಕೆಯಿಂದ, ಅತಿಮಾನುಷ ಶಕ್ತಿಗಳಿಂದ ಅಸಾದ್ಯ ಪರೀಕ್ಷೆಗಳನ್ನು ಜಯಿಸಿದರೆ, ಕಥೆಯ ನಾಯಕಿಯರು ಪಾತಿವ್ರತ್ಯೆಯ ಬಲದಿಂದ ಅತ್ಯಂತ ಕಠಿಣ ಪರೀಕ್ಷೆಯನ್ನು ಜಯಸಿತ್ತಾರೆ. ಯಾವ ರೀತಿಯಾಗಿ ಎಂದರೆ ಒಂದು ನದಿಯ ಮುಂದೆ ನಿಂತು ಗಂಗಾಮಾತೆಯನ್ನು ಕೇಳುತ್ತಾಳೆ ಏನೆಂದರೆ ಇದವರೆಗೆ ನಾನು ಯಾವ ಪರಪುರುಷನು ಇಲ್ಲಿವರೆಗೆ ಕಣ್ಣೆತ್ತಿ ಸಹ ನೋಡಿಲ್ಲ ಎಂದಾಗ ನದಿಯು ಇಬ್ಬಾಗವಾಗಿ ದಾರಿ ಮಾಡಿಕೊಡುವುದನ್ನು ಹಾಗೂ ಸುಡುವ ಎಣ್ಣೆಯಲ್ಲಿ ಕೈ ಇಟ್ಟಾಗ ಕೈ ಸುಡದೆ ಇರುವುದು ಕೇವಲ ಅವರ ಪಾತಿವ್ರತ್ಯೆಯ ಪ್ರಭಾವದಿಂದ ಅನ್ಯವ್ಯಕ್ತಿ ಆಕೆಯನ್ನು ಬಲತ್ಕಾರ ಮಾಡಲು ಬಂದಾಗ ಆಕೆಯನ್ನು ಕಾಪಾಡುವುದು ಪಾತಿವ್ರತ್ಯೆಯೇ ಹೊರತು ಬೇರೆಯಾವುದಲ್ಲ ಎಂದು ಜನಪದರು ಕಥೆಗಳಲ್ಲಿ ಚಿತ್ರಿಸಿದ್ದಾರೆ. ಮಹಿಳೆಯರು ಯಾವ ರೀತಿಯಲ್ಲಿ ತಪ್ಪಿಸಿಕೊಳ್ಳುತ್ತಾರೆ ಎಂದರೆ ನಾನು ವ್ರತವನ್ನು ಮಾಡುತ್ತಿರುವೆ ಅದು ಪೂರ್ಣಗೊಂಡ ಬಳಿಕ ನಾನು ನಿನ್ನನ್ನು ಪಡೆಯುವೆನು ಎಂದು ಹೇಳಿ ಪರಾಗುವುದನ್ನು ಗಮನಿಸಬಹುದಾಗಿದೆ. ಈ ರೀತಿಯಲ್ಲಿ ಮಹಿಳೆಯರು ತಮ್ಮ ಪಾತಿವ್ರತ್ಯೆ ಹಾಗೂ ಶೀಲವನ್ನು ಕಾಪಾಡಿಕೊಳ್ಳಲು ಈ ಕಥೆಯ ನಾಯಕಿಯರು ಅನುಸರಿಸುವ ಉಪಾಯವು ಸ್ವಾರಸ್ಯಕರವಾಗಿವೆ. ಇನ್ನೂ ಆನೇಕ ರೀತಿಯಲ್ಲಿ ಮಹಿಳೆಯರು ಯಾವ ರೀತಿಯಲ್ಲಿ ಇರುತ್ತವೆ ಎಂದರೆ ಪುರುಷರ ಉಡುಪನ್ನು ಧರಿಸಿ ವೇಷ ಬದಲಾಯಿಸುವುದು, ವಿಕೃತವಾಗಿ ಕಾಣುವ ಮುಖವಾಡಗಳನ್ನು ಧರಿಸಿ ತಮ್ಮ ನಿಜ ಸೌಂದರ್ಯವನ್ನು ಮರೆ ಮಾಡುವುದು ಹಾಗೂ ಮುದುಕಿಯರ ವೇಷ ಧರಿಸುವುದು ಇತ್ಯಾದಿ ರೀತಿಯ ವೇಷವನ್ನು ಹಾಕಿಕೊಡು ತಮ್ಮ ಶೀಲವನ್ನು ಕಾಪಾಡಿಕೊಳ್ಳುವುದನ್ನು ನಾವು ಕಥೆಗಳಲ್ಲಿ ಕಾಣಬಹುದಾಗಿದೆ. ಈ ಜನಪದ ಕಥಾ ನಾಯಕಿಯರು ಅನುಭವಿಸ ಬೇಕಾದ ನಿರ್ಬಂದಗಳನ್ನು ಸಹ ಅವರ ಶೀಲ ಮತ್ತು ಪಾತಿವ್ರತ್ಯೆಗಳಿಗೆ ಮಾತ್ರ ಸಂಭದಿಸಿದ್ದು ಆಗಿರುತ್ತವೆ ಅಂದರೆ ಕಥೆಯಲ್ಲಿ ಬರುವ ಕಥಾನಾಯಕಿಯರು ಏಳು ಮಲ್ಲಿಗೆ ತೂಕದ ಸುಂದರಿಯಾಗಿರುತ್ತಾಳೆ. ಅವಳ ತಂದೆಯು ಅವಳ ಮೇಲೆ ಪರ ಪುರುಷರ ಕಣ್ಣು ಬೀಳಬಾರದು ಎಂದು ಅವಳನ್ನು ಉಪ್ಪರಿಗೆಯ ಮೇಲೆ ಇಟ್ಟು ದಿನ ನಿತ್ಯ ಏಳು ಮಲ್ಲಿಗೆಯನ್ನಿಟ್ಟು ತೂಕ ಮಾಡ್ತಾ ಇರುವುದನ್ನು ಕಥೆಯಲ್ಲಿ ನೊಡಬಹುದು ಹೀಗೆ ಒಂದು ದಿನ ತೂಕ ಬಾರದೆ ಇದ್ದಾಗ ತನ್ನ ಮಗಳು ಶೀಲವನ್ನು ಕಳೆದುಕೊಂಡಿದ್ದಾಳೆ ಎಂದು ತಂದೆ ಅರಿಯುತ್ತಾನೆ. ಹೀಗೆ ಆನೇಕ ನಿದರ್ಶನಗಳನ್ನು ಜನಪದರು ಕಥೆಗಳಲ್ಲಿ ಸ್ತ್ರೀಯರು ಅನುಭವಿಸುವ ಕಟ್ಟೆಚ್ಚರದ ಸ್ವರೂಪವನ್ನು ಮತ್ತು ನೋವನ್ನು ಜನಪದರು ಸೂಕ್ಷ್ಮವಾಗಿ ತರುವುದನ್ನು ನಾವು ಅವಲೋಕಿಸಬಹುದಾಗಿದೆ. ಜನಪದರು ಕಥೆಗಳಲ್ಲಿ ಮಹಿಳೆಗೆ ಒಂದು ವಿಶೇಷ ಆದ್ಯತೆಯನ್ನು ನೀಡುತ್ತಾರೆ ಎಂದರೆ ತಪ್ಪಾಗಲಾರದು. ಏಕೆಂದರೆ ಮಹಿಳೆಯನ್ನು ಅವರು ಪೂಜ್ಯನೀಯ ಭಾವನೆಯಿಂದ ಕಾಣುವುದನ್ನು ನಾವು ನೊಡಬಹುದಾಗಿದೆ.

ಯಾವುದೇ ರೀತಿಯಲ್ಲಿ ಜನಪದರು ಮಹಿಳೆಯ ಮೇಲೆ ಅತ್ಯಾಚಾರ ಮಾಡುವುದನ್ನು ಕಥೆಯಲ್ಲಿ ತರದೆ ಕಥೆಯ ಆಶಯವನ್ನು ಎಲ್ಲು ಕಡೆಸಿದೆ ಮಹಿಳೆಗೆ ಗೌರವನ್ನು ಕೊಡುವುದನ್ನು ನಾವು ಗಮನಿಸಬಹುದಾಗಿದೆ. ಜನಪದರು ಮಹಿಳೆಯರು ಅನುಭವಿಸುವ ಸಂಕಷ್ಟವನ್ನು ಕಥೆಗಳಲ್ಲಿ ಸೂಕ್ಷ್ಮವಾಗಿ ಹೇಳುವಲ್ಲಿ ಯಶಸ್ವಿಯಾಗಿದ್ದಾರೆ ಏಕೆಂದರೆ ಪ್ರಸ್ತುತ ಸಂದರ್ಭದಲ್ಲಿನ ಅದೆಷ್ಟೊ ಅಂಶಗಳನ್ನು ಜನಪದರು ಈ ಮುಂಚೆಯೇ ತಂದಿದ್ದಾರೆ ಯಾವುದೇ ರಿತೀಯ ಶಿಷ್ಟ ಸಾಹಿತ್ಯದ ಕಥೆಗಳಿಗೆ ಜನಪದ ಕಥೆಗಳಿಗೆ ಹೋಲಿಕೆ ಮಾಡುವುದು ಕಷ್ಟಸಾದ್ಯ ಹೇಗೆಂದರೆ ತಮ್ಮ ಜೀವನಾನುಭವವನ್ನು ಪದಕ್ಕಿಳಿಸಿ ಕಥೆ ಕಟ್ಟುವ

ಜನಪದರು ಶಿಷ್ಟ ಸಾಹಿತ್ಯದ ಕವಿಗಳಿಗೆ ಸರಿ ಸಮಾನದ ಅಂಶಗಳನ್ನೆ ಕಥೆಯಲ್ಲಿ ತರುವುದನ್ನು ನಾವು ನೋಡಬಹುದಾಗಿದೆ. ಜನಪದರು ಯಾವುದು ಶಿಷ್ಟದಲ್ಲಿ ಶ್ರೇಷ್ಟವಾಗಿರುವುದೊ ಅದು ಜನಪದರಲ್ಲಿ ಕನಿಷ್ಟ ಎನ್ನುವ ಸೂಕ್ಷ್ಮತೆಯನ್ನು ನಾವು ಗಮನಿಸಬಹುದಾಗಿದೆ. ಕಥೆಗಳು ಜನಪದರ ಜೀವನಾನುಭವವನ್ನು ಕಥೆ ರೂಪದಲ್ಲಿ ಹೀಳಿ ಒಂದು ನೀತಿಯನ್ನು ಹೇಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದರೆ ತಪ್ಪಗಲಾರದು. ಎಷ್ಟೋ ವೇಳೆ ಶಿಷ್ಟಕಥೆ ಮತ್ತು ಜನಪದ ಕಥೆಯನ್ನು ಬೇರ್ಪಡಿಸುವುದು ಕಷ್ಟವಾಗುತ್ತದೆ. ಇದಕ್ಕೆ ಸತತವಾಗಿ ನಡೆದಿರುವ ಕೊಂಡುಕೊಳ್ಳುವಿಕೆಯೇ ಮುಖ್ಯ ಕಾರಣ. ಮುಖ್ಯವಾಗಿ ಈ ಮಾತು ಇಲ್ಲಿನ ವಸ್ತುವಿಗೆ ಮಾತ್ರ ಸಂಬಧಿಸಿರುತ್ತದೆ. ಶುದ್ಧ ಸಾಹಿತ್ಯವೇ ಆದ ಅನೇಕ ಕಥೆಗಳು ಜನಪದಕ್ಕೆ ಬಂದು ಪ್ರಚಲಿತವಾಗಿರುವುದನ್ನು ನೋಡಬಹುದಾಗಿದೆ. ನೀತಿ ಬೋಧನೆಗಾಗಿಯೇ ಕೆಲವು ನೀತಿಕಥೆಗಳು ಜನಪದರಲ್ಲಿ ಸೃಷ್ಟಿಯಾಗಿವೆ ಜನಪದ ಜೀವನದ ಮೌಲ್ಯಗಳನ್ನು ನಿರೂಪಿಸುದಕ್ಕಾಗೆ ಇರುವ ಅವು ತುಂಬ ಸಂಕ್ಷಿಪ್ತ ಹಾಗೂ ಸರಳವಾಗಿದ್ದು, ದೈನಂದಿನ ಮಾನವ ಸ್ವಭಾವಗಳ ವರ್ತನೆಗಳ ಹಿನ್ನೆಲೆಯಲ್ಲಿ ನೀತಿಯನ್ನು ನಿರೂಪಿಸುತ್ತದೆ.

ಬಹುತೇಕ ರಾಜರು ತಾವು ರಾಜಕುಮಾರರಿರುವಾಗಲೇ ಒಂದು ಮದುವೆ ಮಾಡಿಕೊಂಡು ಮುಂದೆ ರಾಜರಾದ ಮೇಲೆ ತಮಗೆ ಇಷ್ಟ ಬಂದ ಹೆಣ್ಣುಗಳನ್ನು ಮದುವೆ ಮಾಡಿಕೊಳ್ಳುವ ಹವ್ಯಾಸ ಸಾಮಾನ್ಯವಾಗಿ ತೋರುತ್ತದೆ. ಇವರನ್ನು ಎರಡನೇ ಹೆ0ಡ0ದಿರೆ0ದು ಕರೆಯಬಹುದಾಗಿದೆ. ಹೆಚ್ಚಾಗಿ ಈ ರಾಣಿಯರು ತೀರ ಬಡವರ ಮನೆಯವರು, ಅನಾಥರೂ ಆಗಿರುತ್ತಾರೆ. ಸುಮಾರಾಗಿ ಇವರೇ ರಾಜನಿಂದ ತೊಂದರೆಗೀಡಾಗಿರುತ್ತಾರೆ. ಇಂತಹವರಿಗೆ ಜನಿಸಿದ ಮಗನೇ ನಾಯಕನಾಗಿ ಕಾಣಿಸಿಕೊಳ್ಳುತ್ತಾನೆ. ಈ ಸ್ಪುರದ್ರೂಪಿ, ಶೂರ, ಚಾಣಾಕ್ಷ ಮಗನಿಂದಾಗಿ ಕಷ್ಟಕ್ಕೊಳಗಾದ ತಾಯಂದಿರು ಕೊನೆಗೆ ಗಂಡನನ್ನು ಸೇರುತ್ತಾರೆ. ಹೀಗಾಗಿ ಒಂದು ರೀತಿಯಲ್ಲಿ ಗೆಲುವಿನ ಶಿಖರಗಳಾಗಿ ನಿಲ್ಲುತ್ತಾರೆ, ಒಂದು ಕಡೆ ಮೂವರು ಪರದೇಶಿ ಅಕ್ಕ ತಂಗಿಯರು ಮಾತಾಡುವುದನ್ನು ರಾಜನು ಮರೆಯಾಗಿ ಕುಳಿತು ಕೇಳಿದನು. ಅವರಲ್ಲಿ ಕಿರಿಯಾಕೆ ರಾಜನನ್ನು ಮದುವೆಯಾಗ ಬಯಸಿದ್ದರಿಂದ, ತಾನು ಆಕೆಯನ್ನು ಮದುವೆಯಾಗುತ್ತಾನೆ. ಬಾಣಂತನಕ್ಕೆ ಬಂದ ಆಕೆಯ ಅಕ್ಕಂದಿರು ರಾಣಿಯಾದವಳು ಪಡೆದ ಎರಡು ಗಂಡು, ಒಂದು ಹೆಣ್ಣನ್ನು ನೀರಿಗೆ ಹಾಕಿ–ಇಲಿ, ಬಾರಿಗೆ, ಗಂಡಗಲ್ಲುಗಳಿಗೆ ಜನನ ನೀಡಿದಳೆಂದು ಹೇಳುತ್ತಾರೆ. ಇದನ್ನು ರಾಜನು ನಿಜವೆಂದೇ ತಿಳಿದು ಅವಳನ್ನು ಊರ ಹೊರಗೆ ಹಾಕುತ್ತಾನೆ. ಇಲ್ಲಿ ಅರಸರ ವ್ಯವಹಾರ ಜ್ಞಾನಶೂನ್ಯತೆ ಎದ್ದು ಕಾಣುತ್ತದೆ. ನದಿಯ ಪಾಲಾದ ಮಕ್ಕಳು ಮುಂದೆ ಮಾಟದ ಸಾಧನಗಳಿಂದ ಗಮನ ಸೆಳೆದು, ರಾಜನನ್ನು ಊಟಕ್ಕೆ ಆಹ್ವಾನಿಸುತ್ತಾರೆ. ರಾಜಕುಮಾರಿ ಅರಸನ ತಟ್ಟೆಗೆ ಗುಂಡಗಲ್ಲು ಬಡಿಸುತ್ತಾಳೆ. ಈ ಬಗ್ಗೆ ಪ್ರಶ್ನಿಸಿದ ರಾಜನಿಗೆ, ಯಾರಾದರೂ ಗುಂಡುಗಲ್ಲು, ಬಾರಿಗೆಗಳಿಗೆ ಜನನ ಕೊಡುತ್ತಾರೆಯೇ ಎಂದು ಅಣಕಿಸುತ್ತಾಳೆ. ನಿಜ ಸಂಗತಿ ಅರಿವಿಗೆ ಬಂದರೂ ನಿಜವಾಗಿಯೂ ಇವರು ತಾನು ಹೊರದೂಡಿದ ರಾಣಿಯ ಮಕ್ಕಳೇ ಎಂಬುದನ್ನು ಪರೀಕ್ಷಿಸಿ, ಹೌದೆಂದು ಕಂಡುಬಂದಾಗ, ಹೆಂಡತಿ ಮಕ್ಕಳನ್ನು ಸ್ವೀಕರಿಸುತ್ತಾನೆ. ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣರಾದವರನ್ನು ಶಿಕ್ಷಿಸುತ್ತಾನೆ, ಇನ್ನೊಂದು ಕಡೆ ದಾರಿಯಲ್ಲಿ ಐದು ಕಲ್ಲಿಟ್ಟು– ನಾಲ್ಕು ಗಂಡು ಒಂದು ಹೆಣ್ಣು ಮಗುವೆಂದು ಆಡುವ ಕನ್ಯೆಗೆ ನೋಡಿದ ರಾಜನು ಅವಳನ್ನು ಮದುವೆಯಾಗುತ್ತಾನೆ, ಮತ್ತೊಂದು ಕತೆಯಲ್ಲಿ ರಾಜನಿಗೆ ಮದುವೆಯಾದರೆ, ಕಾಲಗ ಚುಕ್ಕಿ ಹಣೆಯ ಮೇಲೆ ಚಂದ್ರ ಇರುವ ಮಗುವನ್ನು ಹಡೆಯುತ್ತೇನೆಂದು ಹೇಳಿದ ಕನ್ಯೆಗೆ ರಾಜನೊಬ್ಬನು ಸ್ವತಃ ವರಿಸುತ್ತಾನೆ ಇಲ್ಲೆಲ್ಲ ಸಾಮಾನ್ಯವಾಗಿ

ಮೇಲಿನಂತೆಯೇ ನಡೆದು, ಕೊನಗೆ ಹೆಂಡರು ಮಕ್ಕಳನ್ನು ಆರಸರು ಗುರುತಿಸುತ್ತಾರೆ. ಈ ಮೇಲಿನ ಉದಾಹರಣೆಗಳಲ್ಲಿ ರಾಜನು ಮಾಡಿಕೊಂಡ ಹೆಂಗಸರ ಮನೆತನದ ಮೂಲದ ಬಗ್ಗೆ ಪ್ರಶ್ನೆ ಬರುವುದೇ ಇಲ್ಲ. ಇವರೆಲ್ಲ ಕೇವಲ ಅನಾಥರು, ಬಡವರು, ದಿಕ್ಕೇಡಿಗಳು. ಇಂತಹ ಇನ್ನೂ ಒಂದೆರಡು ಉದಾಹರಣೆಗಳೂ ಕಥೆಯಲ್ಲಿ ಸಿಗುತ್ತವೆ. ಒಂದು ಕತೆಯಲ್ಲಿ ಊರ ಹೊರಗಿನ ಗಿಡದಲ್ಲಿದ್ದ ಹೆಣ್ಣಿನ ಶವವನ್ನು ಕಂಡು, ಅವಳ ಅಂಗೈಯಲ್ಲಿ ನೆಡಲಾದ ರಾಕ್ಷಸನ ಹಲ್ಲನ್ನು ಕೀಳಲು ಎಚ್ಚರಾದ ಆಕೆಯನ್ನು ಮೋಹಿಸಿ ಮದುವೆಯಾಗುತ್ತಾನೆ. ಇನ್ನೊಂದು ಕಡೆ ಉಪ್ಪಿನಕಾಯಿಗುಟ್ಟೆಯಲ್ಲಿ ದೊರೆತ ಹೆಣ್ಣನ್ನು ಮದುವೆಯಾಗುತ್ತಾನೆ. ಈ ರೀತಿಯಲ್ಲಿ ರಾಜನ ಹೆಂಡತಿಯರ ಬಗ್ಗೆ ಜನಪದರು ಕಥೆಯಲ್ಲಿ ಚಿತ್ರಿಸಿದ್ದಾರೆ.

**ದಾಸಿಯರು**

ರಾಣಿಯರು, ರಾಜಕುಮಾರಿಯರು ಎಂದ ಮೇಲೆ ದಾಸಿಯರು ಇರಲೇಬೇಕು. ರಾಣಿಯರ ಊಟ ಉಪಚಾರ, ಬಟ್ಟೆಬರೆ ಇತ್ಯಾದಿಗಳ ವ್ಯವಸ್ಥೆಯಿಂದ, ಶಯಾಗಾರ ಶೃಂಗರಿಸುವವರೆಗೆ ದಾಸಿಯರದೇ ಕಾರುಭಾರು, ರಾಣಿಯರು ಹೆತ್ತ ಕೂಸುಗಳಿಗೆ ಸಾಕು ತಾಯಂದಿರು ಇವರೇ ಆಗಿರುತ್ತಾರೆ. ಒಬ್ಬ ರಾಣಿ ತನ್ನ ಮಗುವಿಗೆ ಹಾಲು ತರಲು ಕಳಿಸಿದರೆ, ದೂರ ನಡೆದು ಹೋಗದೆ ದಾಸಿ, ಸನಿಹದಲ್ಲಿಯೇ ಸಿಗುವ ಕುರಿಯ ಹಾಲನ್ನೇ ತಂದು ಕುಡಿಸುತ್ತಿದ್ದಳು. ಈಕೆ ಯಾವ ಹಾಲು ತಂದು ಕುಡಿಸಿದಳು ಎಂದು ಕೂಡ ರಾಣಿಯರು ವಿಚಾರಿಸುತ್ತಿರಲಿಲ್ಲ. ಒಂದೊಂದು ಕಡೆ ರಾಜಮನೆತನಕ್ಕೆ ತೀರ ಹತ್ತಿರದವರಾಗಿರುತ್ತಿದ್ದರು. ಪ್ರಸಂಗಬಂದರೆ ತಮ್ಮ ಪ್ರಾಣ ಕೊಡಲು ಕೂಡ ಅವರು ಸಿದ್ಧರಿರುತ್ತಿದ್ದರು, ಒಂದು ಕತೆಯಲ್ಲಿ ಬೇರೊಬ್ಬ ರಾಜನು ದಾಳಿ ಮಾಡಿ ಒಂದು ರಾಜ್ಯವನ್ನು ವಶಪಡಿಸಿಕೊಳ್ಳುತ್ತಾನೆ. ರಾಜಮನೆತನದ ಎಲ್ಲರನ್ನೂ ಕೊಲ್ಲುತ್ತಾನೆ, ದಾಸಿ ರಾಜಕುಮಾರನನ್ನು ಎತ್ತಿಕೊಂಡು ಓಡಿಹೋಗಿ, ಬೇರೆ ಊರನ್ನು ಸೇರುತ್ತಾಳೆ. ಮಗುವನ್ನು ಜೋಪಾನ ಮಾಡುತ್ತಾಳೆ, ರಾಣಿಯರೂ ರಾಜಕುಮಾರಿಯರೂ ನಡೆಸುವ ಕುಟಿಲ ಕೆಲಸಗಳಿಗೆಲ್ಲ ದಾಸಿಯರೇ ಮಧ್ಯಸ್ಥಿಕೆ ವಹಿಸುತ್ತಾರೆ. ರಾಜಕುಮಾರಿಯ ದಾಸಿಯೋರ್ವಳು, ರಾಜಕುಮಾರಿ ಇಟ್ಟ ಶರತ್ತನ್ನು ಪೂರೈಸಿ, ಗೆದ್ದೊಯ್ಯಲು ಬಂದ ನಾಯಕನಲ್ಲಿ ಒಂದು ರಾತ್ರಿ ಕಳೆದು, ಅವನಲ್ಲಿರುವ ಮಾಟದ ವಸ್ತುಗಳನ್ನು ಅಪಹರಿಸುತ್ತಾಳೆ.ಇದು ಜನಪದರು ಕಂಡುಕೊಂಡ ದಾಸಿಯರ ವಿಚಾರವಾಗಿದೆ.

**ಪರಾಮರ್ಶನ ಗ್ರಂಥಗಳು**


- ಗಂಗಾನಾಯಕ್ ಮತ್ತು ಗೌರೀಶ. (ಪ್ರ.ಸಂ) (2011). *ಜಾನಪದ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
- ರಂಗರೆಡ್ಡಿ ಕೋಡಿರಾಂಪುರ. (2010). *ಜನಪದ ಸಂಸ್ಕೃತಿ.* ಕನ್ನಡ ಸಾಹಿತ್ಯ ಪರಿಷತ್.
- ರಾಗೌ. (2012). *ಜಾನಪದ ಸಂಶೋಧನ.* ತನುಮನ ಪ್ರಕಾಶನ.
- ಸಂದ್ಯಾರೆಡ್ಡಿ. ಕೆ. ಆರ್. (2014). ಜಾನಪದ ಅಧ್ಯಯನ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ
- ವಿರಣ್ಣ ದಂಡೆ. (2003). *ಕಲ್ಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು.* ಸಿ.ವಿ.ಜಿ. ಪಬ್ಲಿಕೇಷನ್.
- ವಿರಣ್ಣ ದಂಡೆ. (2011). ಆಯ್ದ ಜನಪದ ಕಥೆಗಳು. ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿ.ವಿ.